ಶ್ರೀ ಎಂ. ರಾಜಶೇಖರಮೂರ್ತಿ (ಆರ್ಥಿಕ ಮತ್ತು ಅಬಕಾರಿ ಮಂತ್ರಿಗಳು) —

ಅ) ಇಲ್ಲ.

ಆ) ಹೌದು.

ಇ) ಸುಮಾರು ೫೦ ಕೋಟಿ ರೂ.ಗಳು.

ಇತ್ತೀಚೆಗೆ ಗ್ರಾನೈಟ್ ವ್ಯವಹಾರದಿಂದ ಸರ್ಕಾರಕ್ಕೆ ಹೆಚ್ಚಾಗಿರುವ ವರಮಾನದ ಬಗ್ಗೆ

೭೮೩. ಶ್ರೀ ಕೆ. ಲಕ್ಕಪ್ಪ (ಕುಣಿಗಲ್)— ಮಾನ್ಯ ಯೋಜನೆ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಮತ್ತು ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಸರ್ಕಾರದ ಇತ್ತೀಚಿನ ತೀರ್ಮಾನದಿಂದ ಗ್ರಾನೈಟ್ ವ್ಯವಹಾರದಲ್ಲಿ ಯಾವುದೇ ಬದಲಾವಣೆ ತಂದಿದೆಯೇ ಮತ್ತು ಇದರಿಂದ ಸರ್ಕಾರಕ್ಕೆ ವರಮಾನ ಹೆಚ್ಚಿದೆಯೇ ?

ಆ) ರಾಜ್ಯದಲ್ಲಿ ಗ್ರಾನೈಟ್ ಸಂಪತ್ತಿನ ಬಗ್ಗೆ ಯಾವುದೇ ನಿರ್ಧಾರ ಮಾಡಲ್ಪಟ್ಟಿದೆಯೇ ?

ಇ) ಹಾಗಿದ್ದಲ್ಲಿ, ಗ್ರಾನೈಟ್ ವ್ಯವಹಾರದ ನಿರ್ವಹಣೆ ಮತ್ತು ಸಂಘಟನೆಯಲ್ಲಿ ಸರ್ಕಾರದ ನಿಯಂತ್ರಣವೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಯೋಜನೆ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಮತ್ತು ಪ್ರವಾಸೋದ್ಯಮ ಮಂತ್ರಿಗಳು)—

ಅ) ಗ್ರಾನೈಟ್ ಬಗೆಗಿನ ಹೊಸಧೋರಣೆಯ ಉಚಿತ ವರಮಾನಕ್ಕೆ ಸಂಬಂಧಿಸಿದಂತೆ ಪರಿಣಾಮವನ್ನು ನಿರ್ಧಾರಣೆ ಮಾಡಲು ಸರ್ವೇಯವು ಇನ್ನೂ ಪೂರ್ತವಾಗಿರುವುದಿಲ್ಲ. ಅಲ್ಲದೆ ಇಲ್ಲಿಯವರೆವಿಗೂ ಯಾವುದೇ ಕಲ್ಲು ಗಣಿ ಗುತ್ತಿಗೆ ಮಂಜೂರು ಮಾಡಿರುವುದಿಲ್ಲ.

ಆ) ೧೦ ವಿ. ಆಳದವರೆಗೆ ಸ್ಥೂಲವಾಗಿ ಅಂದಾಜು ಮಾಡಲ್ಪಟ್ಟಿದೆ.

ಇ) ಗ್ರಾನೈಟ್ ಗಣಿಗುತ್ತಿಗೆಯ ಮಂಜೂರಾತಿ ಮತ್ತು ನಿರ್ವಹಣೆಯನ್ನು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿಯ ನಿಯಮ ೩ 'ಎ'ರ ಪ್ರಕಾರ ನಿಯಂತ್ರಿಸಲಾಗುತ್ತಿದೆ.

ಅಬಕಾರಿ ಗುತ್ತಿಗೆದಾರರು ಹೆಚ್ಚು ಮೊತ್ತದ ಬಾಕಿಯನ್ನು ಪಾವತಿ ಮಾಡದೆ ಇರುವ ಬಗ್ಗೆ

೭೮೫. ಶ್ರೀ ಕೆ. ಲಕ್ಕಪ್ಪ (ಕುಣಿಗಲ್)—ಮಾನ್ಯ ಆರ್ಥಿಕ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಅಬಕಾರಿ ಗುತ್ತಿಗೆದಾರರು ಹೆಚ್ಚು ಮೊತ್ತದ ಬಾಕಿಯನ್ನು ಉಳಿಸಿಕೊಂಡಿದ್ದು ಅವರು ಅದನ್ನು ಬಹಳ ಕಾಲದಿಂದ ಪಾವತಿ ಮಾಡದೇ ಇರುವುದು ನಿಜವೇ ?

ಆ) ಪ್ರತಿಯೊಬ್ಬ ಗುತ್ತಿಗೆದಾರರು ಹರಾಜಿನಲ್ಲಿ ಬೇನಾಮಿ ಹೆಸರಿನಲ್ಲಿ ಗುತ್ತಿಗೆ ಪಡೆದು ತೆರಿಗೆಯನ್ನು ತಪ್ಪಿಸಿಕೊಳ್ಳುತ್ತಿರುವುದು ನಿಜವೆ ?

ಇ) ಬಾಕಿ ಹಣ ವಸೂಲಾತಿಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಎಂ. ರಾಜಶೇಖರ ಮೂರ್ತಿ (ಆರ್ಥಿಕ ಮತ್ತು ಅಬಕಾರಿ ಮಂತ್ರಿಗಳು)—

ಅ) ಹೌದು.

ಆ) ಇಲ್ಲ.

ಇ) ಬಾಕಿ ವಸೂಲಾತಿಗೆ ತಡೆಯಾಜ್ಞೆ ಇರುವ ಪ್ರಕರಣಗಳಲ್ಲಿ ತಡೆಯಾಜ್ಞೆಯನ್ನು ತೆರವು ಮಾಡಲು ಕ್ರಮ ಕೈಗೊಳ್ಳಲಾಗಿದೆ. ಇನ್ನುಳಿದ ಬಾಕಿ ಹಣವನ್ನು ಜಮೀನಿನ ಕಂದಾಯ ಕಾಯಿದೆ ಮೇರೆಗೆ ವಸೂಲಿ ಮಾಡಲು ಕ್ರಮ ಜರುಗಿಸಲಾಗಿದೆ.